ನಿಮಗೆ ಒಂದಲ್ಲ ಒಂದು ರೀತಿಯಿಂದ ಸಹಕಾರವಿರುವುದರಿಂದ ಇವತ್ತು ನಿರ್ಭೀತಿಯಿಂದ ಪೊಲೀಸ್ ಅಧಿಕಾರಿಗಳು ಕೆಲಸ ಮಾಡುವುದಕ್ಕೆ ಆಗದೇ ಇರುವುದರಿಂದ ಇದನ್ನು ನೀವು ಸಿಬಿಐಗೆ ವಹಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಏಷಿಯನ್ ಏಜ್ ಪತ್ರಿಕೆಯಂತೆ ಮುಂದೆ ಆಗಬಾರದೆಂದು ನಾವು ಈ ರೀತಿಯ ಕ್ರಮವನ್ನು ಕೈಗೊಂಡಿರುವುದು.

(ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು, ಬಿ.ಜೆ.ಪಿ ಪಕ್ಷದ ಸದಸ್ಯರುಗಳು ಮಾನ್ಯ ವಾಟಾಳ್ ನಾಗರಾಜ್‌ರವರು ಹಾಗೂ ಇನ್ನಿತರ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು).

MR. SPEAKER : Have you to say something?

ಶ್ರೀ ಆರ್. ರೋಷನ್ ಬೇಗ್ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರರೆ, ಶ್ರೀಮತಿ ಪ್ರಮೀಳಾ ನೇಸರ್ಗಿಯವರು ನಮ್ಮ ಕಛೇರಿಯಿಂದ ಫೋನ್ ಮಾಡಿದ್ದರು ಎಂದು ಹೇಳಿದರು. Sir, on 29th Sadiq, Imtiaz and Aslam were arrested and send to the court on 30th where they were released on bail by the Hon'ble court. This is for the information of the House.

ಶ್ರೀ ಕೆ. ವೆಂಕಟೇಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಸತ್ಯ ನಾರಾಯಣರ ಕೊಲೆ ಕೇಸ್‌ನಲ್ಲಿ ಶಾಸಕರುಗಳ ಹೆಸರುಗಳು ಪತ್ರಿಕೆಗಳಲ್ಲಿ ಪ್ರಸ್ತಾಪವಾಗಿದೆ, ಎನ್ನುವ ವಿಚಾರವನ್ನು ತಿಳಿಸಿದ್ದಾರೆ.

ಅಧ್ಯಕ್ಷರು : ಬೇಡ, ಚೆನ್ನಾಗಿರುವುದಿಲ್ಲ, ಅವರು ಸಭೆಯಲ್ಲಿ ಇಲ್ಲ. ಪರವಾಗಿಲ್ಲ ಬಿಡಿ. ಅವರು ನಿಮ್ಮ ಮೇಲೆ ಏನು ಅಲಿಗೇಷನ್ ಮಾಡಿಲ್ಲ. ಈಗ ಒಂದೆರಡು ಪ್ರಕಟಣೆಗಳು ಇದೆ, ಅದನ್ನು ಓದುತ್ತೇನೆ.

## ಪ್ರಕಟಣೆಗಳು

ಅಧ್ಯಕ್ಷರು :

1. ಬಿ.ಜೆ.ಪಿ. ಶಾಸಕಾಂಗ ಪಕ್ಷದ ಉಪ ನಾಯಕರಾಗಿದ್ದ ಶ್ರೀ ವೈ. ರಾಮಕೃಷ್ಣರವರ ನಿಧನದಿಂದ ತೆರವಾಗಿರುವ ಸ್ಥಾನಕ್ಕೆ ಶ್ರೀ ಎಸ್. ಸುರೇಶ್ ಕುಮಾರ್‌ರವರನ್ನು ಉಪ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಬಿ.ಜೆ.ಪಿ ಶಾಸಕಾಂಗ ಪಕ್ಷದ ನಾಯಕರು ತಿಳಿಸಿರುವುದರಿಂದ ಶ್ರೀ ಎಸ್. ಸುರೇಶ್ ಕುಮಾರ್‌ರವರನ್ನು ವಿಧಾನ ಸಭೆಯಲ್ಲಿ ಬಿ.ಜೆ.ಪಿ ಶಾಸಕಾಂಗ ಪಕ್ಷದ ನಾಯಕರನ್ನಾಗಿ ನೇಮಿಸಲಾಗಿದೆ.

2. ದಿನಾಂಕ: 31.7.1997ರಂದು ಆಲ್ ಇಂಡಿಯಾ ಅಣ್ಣಾ ಡಿಎಂಕೆ ಪಕ್ಷದ ವಿಧಾನ ಸಭಾ ಸದಸ್ಯರಾದ ಶ್ರೀ ಬಿ. ಮುನಿಯಪ್ಪನವರು ನನಗೆ ಪತ್ರವನ್ನು ಬರೆದು ದಿನಾಂಕ : 22.5.1997ರಿಂದ ಎ.ಐ.ಎ.ಡಿ.ಎಂ.ಕೆ ಪಕ್ಷ ಇಬ್ಭಾಗವಾದ ನಂತರ ಅವರು ಶ್ರೀಮತಿ ಜಯಲಲಿತರವರ ನಾಯಕತ್ವದ

ಪಕ್ಷದಿಂದ ಬೇರ್ಪಟ್ಟ ಗುಂಪಿನ ಶಾಸಕಾಂಗ ಪಕ್ಷದ ನಾಯಕರು ಆದ ಶ್ರೀ ತಿರುನಾವುಕರಸುರವರಿಗೆ ದಿನಾಂಕ : 26.5.1997ರಿಂದ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿರುವುದಾಗಿ ತಿಳಿಸಿರುವುದರಿಂದ ಶ್ರೀ ಬಿ. ಮುನಿಯಪ್ಪನವರನ್ನು ಎ.ಐ.ಎ.ಡಿ.ಎಂ.ಕೆ ಪಕ್ಷದ ಸದಸ್ಯರನ್ನಾಗಿ ನೇಮಿಸಲಾಗಿದೆ.

ಅಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ ಸೋಮವಾರ ಬೆಳಿಗ್ಗೆ 10 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 40 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 11ನೇ ಆಗಸ್ಟ್ ಮಾಹೆ 1997ರ ಸೋಮವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

---

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).